# PREPARATION FO CHARGE SHEET

| Sl.No | Date | Type | File No | Subject |
|---|---|---|---|---|
| 1. | 5.6.1986 | Official Memorandum | ಸಿಆಸುಇ 09 ಸೇಇವಿ 96, | ಇಲಾಖಾ ತನಿಖೆಯಲ್ಲಿ ಶಿಸ್ತು ಪ್ರಾಧಿಕಾರವು ಆಪಾದಿನ ನೌಕರನಿಗೆ ಆರೋಪಗಳ ವಿಷಯ ಮತ್ತು ದುರ್ನಡತೆ ಅಥವಾ ದುರ್ವರ್ತನೆಯ ಆರೋಪ ಪಟ್ಟಿಯನ್ನು ತಯಾರಿಸಿ ಒದಗಿಸುವ ಬಗ್ಗೆ. |

**ಕರ್ನಾಟಕ ಸರ್ಕಾರ**

ಸಂಖ್ಯೆ: ಸಿಆಸುಇ 09 ಸೇಇವಿ 86

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನಸೌಧ
ಬೆಂಗಳೂರು, ದಿನಾಂಕ: 05.06.1986

**ಅಧಿಕೃತ ಜ್ಞಾಪನ**

**ವಿಷಯ:** ಇಲಾಖಾ ತನಿಖೆಯಲ್ಲಿ ಶಿಸ್ತು ಪ್ರಾಧಿಕಾರವು ಆಪಾದಿತ ನೌಕರನಿಗೆ ಆರೋಪಗಳ ವಿಷಯ ಮತ್ತು ದುರ್ನಡತೆ ಅಥವಾ ದುರ್ವರ್ತನೆಯ ಆರೋಪಗಳ ಪಟ್ಟಿಯನ್ನು ತಯಾರಿಸಿ ಒದಗಿಸುವ ಬಗ್ಗೆ.

*****

ಕೆಲವು ಇಲಾಖಾ ತನಿಖೆಗಳ ಪ್ರಕರಣಗಳಲ್ಲಿ ಶಿಸ್ತು ಪ್ರಾಧಿಕಾರವು, ಪೂರ್ವಭಾವಿ ತನಿಖೆ ವರದಿಯನ್ನು ಮಾತ್ರ ಆಧಾರವಾಗಿ ಇಟ್ಟುಕೊಂಡು ಆಪಾದಿತ ನೌಕರನ ವಿರುದ್ಧ ಆರೋಪಗಳ ವಿಷಯ ಮತ್ತು ದುರ್ನಡತೆ ಅಥವಾ ದುರ್ವರ್ತನೆ ಆರೋಪಗಳ ಪಟ್ಟಿಯನ್ನು ತಯಾರಿಸಿ ಅಪಾದಿತ ನೌಕರನಿಗೆ ಒದಗಿಸಿರುವುದು ಮತ್ತು ಪೂರ್ವಭಾವಿ ತನಿಖೆ ವರದಿಯನ್ನು ದಸ್ತಾವೇಜು ಪಟ್ಟಿಯಲ್ಲಿ ಸೇರಿಸಿ ಆರೋಪಗಳ ವಿಷಯವನ್ನು ಸಾಬೀತು ಪಡಿಸಲು ಈ ವರದಿಯನ್ನು ಅವಲಂಬಿಸಿರುವ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆ. ಪೂರ್ವಭಾವಿ ವರದಿಯು ಅನೌಪಚಾರಿಕ ಸ್ವಭಾವವಾಗಿದ್ದು ಆ ವರದಿಯನ್ನು ಶಿಸ್ತು ಪ್ರಾಧಿಕಾರವು ಆಪಾದಿತ ನೌಕರನ ವಿರುದ್ಧ ಯಾವುದೇ ಕ್ರಮವನ್ನು ತೆಗೆದುಕೊಳ್ಳಬೇಕೆ ಅಥವಾ ಬೇಡವೇ? ಎಂಬುದನ್ನು ನಿರ್ಧರಿಸುವುದಕ್ಕೆ ಮಾತ್ರ ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆಂಬುದನ್ನು ಶಿಸ್ತು ಪ್ರಾಧಿಕಾರಗಳ ಗಮನಕ್ಕೆ ಈ ಮೂಲಕ ತರಲಾಗಿದೆ. ಯಾವುದೇ ಪೂರ್ವಭಾವಿ ತನಿಖೆ ವರದಿಯು ಆಪಾದಿತ ನೌಕರನನ್ನು ದೋಷ ವಿಮುಕ್ತನನ್ನಾಗಿ ಪರಿಗಣಿಸುವುದಕ್ಕಾಗಲೀ ಅಥವಾ ಶಿಕ್ಷೆ ವಿಧಿಸುವುದಕ್ಕಾಗಲೀ ಅವಕಾಶ ಮಾಡುವುದಿಲ್ಲ. ಆದರೆ ಆಪಾದಿತ ನೌಕರನ ಮೇಲೆ ಮುಂದೆ ಯಾವುದೇ ಕ್ರಮ ತೆಗೆದುಕೊಳ್ಳಬಹುದೇ ಎಂಬುದನ್ನು ತೀರ್ಮಾನಿಸಲು ಅವಕಾಶ ಮಾಡಿಕೊಡುತ್ತದೆ. ಪೂರ್ವಭಾವಿ ತನಿಖೆಯು ಆ ತನಿಖೆಯನ್ನು ನಡೆಸುವ ಅಧಿಕಾರಿಯ ವಿವೇಚನೆಗೆ ಒಳಪಟ್ಟಿರುತ್ತದೆ ಮತ್ತು ಅಂತಹ ತನಿಖೆಯ ಸಂವಿಧಾನದ ಅನುಚ್ಛೇದ 311 (2) ರಲ್ಲಿರುವ ನಿಯಮವನ್ನು ಪರಿಪಾಲಿಸುವುದಿಲ್ಲ ಮತ್ತು ಆಪಾದಿತ ನೌಕರನು ಸಾಕ್ಷಿಗಳನ್ನು ಪಾಟೀಸವಾಲು ಮಾಡುವುದಕ್ಕಾಗಲೀ ಅಥವಾ ಅವನ ಪ್ರತಿವಾದವನ್ನು ಮಂಡಿಸುವುದಕ್ಕೆ ಅವಕಾಶವಿರುವುದಿಲ್ಲ. ಆಪಾದಿತ ನೌಕರನನ್ನು ಪೂರ್ವಭಾವಿ ತನಿಖೆಯಲ್ಲಿ ಒಳಗೊಡಿಸಬೇಕೆಂಬ ನಿಯಮವೇನಿರುವುದಿಲ್ಲ ಮತ್ತು ಸಾಮಾನ್ಯವಾಗಿ ಪೂರ್ವಭಾವಿ ತನಿಖೆಯನ್ನು ಸಂಬಂಧಪಟ್ಟ ನೌಕರರ ಎದುರಿಗೆ ನಡೆಸುವುದಿಲ್ಲ. ಆದ್ದುದರಿಂದ ಶಿಸ್ತು ಪ್ರಾಧಿಕಾರವು ಆಪಾದಿತ ನೌಕರನ ವಿರುದ್ಧ ಯಾವುದೇ ಆಪಾದನೆಯನ್ನು ಹೊರಿಸಿ ಅಂತಹ ಆಪಾದನೆ ಪಟ್ಟಿ ಮತ್ತು ಆರೋಪ ವಿಷಯಗಳನ್ನು ಸಮರ್ಥಿಸಲು ಪ್ರಸ್ತಾಪವಿರುವಂತಹ ದಸ್ತಾವೇಜು ಪಟ್ಟಿ ಮತ್ತು ಸಾಕ್ಷಿಗಳನ್ನು ಸಂಬಂಧಪಟ್ಟ ದಾಖಲೆಗಳ ಮೇಲೆ ಮಾತ್ರ ತಯಾರಿಸಿ ಒದಗಿಸಬೇಕಾಗುತ್ತದೆ. ಆಪಾದನೆ ಪಟ್ಟಿಯಲ್ಲಿ ನಮೂದಿಸಿರುವ ಯಾವುದೇ ದಾಖಲೆಗಳನ್ನು ಆಪಾದಿತ ನೌಕರನ ಪರಿಶೀಲನೆಗೆ ಅವಶ್ಯಬಿದ್ದಲ್ಲಿ ಒದಗಿಸಬೇಕಾಗುತ್ತದೆ. ಆದ್ದುದರಿಂದ ಪೂರ್ವಭಾವಿ ತನಿಖೆಯ ಆಧಾರದ ಮೇಲೆ ಯಾವುದೇ ಆಪದಾನೆ ಪಟ್ಟಿಯನ್ನು ತಯಾರಿಸುವುದಾಗಲೀ ಅಥವಾ ಈ ವರದಿಯನ್ನು ಅಪಾದನೆ ಪಟ್ಟಿಯಲ್ಲಿ ನಮೂದಿಸುವುದಾಗಲೀ ಮಾಡಕೂಡದು ಹಾಗೂ ಆಪಾದನಾ ಪಟ್ಟಿಯನ್ನು ಸಂಬಂಧಪಟ್ಟ ದಾಖಲೆಗಳನ್ನು ಆಧರಿಸಿ ಮಾತ್ರ ತಯಾರಿಸಿ ಆಪಾದಿತ ನೌಕರನಿಗೆ ಒದಗಿಸಬೇಕೆಂದು ಈ ಮೂಲಕ ಸೂಚಿಸಲಾಗಿದೆ.

ಸರ್ಕಾರದ ಕಾರ್ಯದರ್ಶಿಗಳು ಮತ್ತು ಇಲಾಖಾ ಮುಖ್ಯಸ್ಥರು ಮೇಲಿನ ಸೂಚನೆಗಳನ್ನು ತಮ್ಮ ಅಧೀನದಲ್ಲಿ ಕಾರ್ಯನಿರ್ವಹಿಸುವ ಎಲ್ಲಾ ನೇಮಕಾಧಿಕಾರಿಗಳು/ಶಿಸ್ತು ಪ್ರಾಧಿಕಾರಿಗಳ ಗಮನಕ್ಕೆ ತರತಕ್ಕದ್ದು.

ಸಹಿ/-
**ಎಂ.ಎಂ.ನಾಯ್ಕ್,**
ಸರ್ಕಾರದ ಸಹ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ,
(ಸೇವಾ ನಿಯಮಗಳು)